(3) ರಾಜ್ಯದಲ್ಲಿ ಸೆಕೆಂಡ್ಸ್ ಹಾವಳಿ ತಡೆಯುವ ಉದ್ದೇಶದಿಂದ 1989 ರಲ್ಲಿ ಅಬಕಾರಿ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಿ ರಾಜ್ಯದ ಏಜೆನ್ಸಿಯೊಂದು ಏಕೈಕ ವಿತರಣಕರಾಗಿ ಮಾಡುವ ಪ್ರಸ್ತಾಪವನ್ನು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಪುರಸ್ಕರಿಸಿದ್ದರೂ ಈವರೆಗೂ ಯಾಕೆ ಜಾರಿಗೊಳಿಸಿಲ್ಲ. ಹಾಗೂ ಇದನ್ನು ಜಾರಿಗೊಳಿಸುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು;

(4) ಸರ್ಕಾರಿ ಏಜನ್ಸಿ ಮೂಲಕ ಮದ್ಯವರ್ತಿಗಳಿಗೆ ವ್ಯವಸ್ಥೆ ಮಾಡಿದರೆ ರಾಜ್ಯ ಸರ್ಕಾರಕ್ಕೆ ಸೋರಿಹೋಗುತ್ತಿರುವ ಸುಮಾರು 700 ಕೋಟಿಯಿಂದ 1000 ಕೋಟಿ ರೂ. ಆದಾಯ ಬರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

(5) ಬಂದಿದ್ದರೆ ಈ ಸೋರುವಿಕೆ ತಡೆಯಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ. ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿಗಳು.)

(1)

ವರ್ಷ		ಅಬಕಾರಿ ಆದಾಯ (ಕೋಟಿ ರೂ.ಗಳಲ್ಲಿ)
1994-95	-	713.47
1995-96	-	820.31
1996-97	-	660.01

(ಜನವರಿ 97 ರವರೆಗೆ ಅಂದಾಜು).

(2)

ವರ್ಷ	ಸಾರಾಯಿ	ಭಾರತೀಯ ತಯಾರಿಕಾ ಮದ್ಯ
1994-95	547.30	118.03
1995-96	616.39	160.57
1996-97	471.26	118.48

(ಜನವರಿ 97 ರವರೆಗೆ ಅಂದಾಜು)

(3) ಬದಲಾಗುತ್ತಿರುವ ಆರ್ಥಿಕ ಉದಾರೀಕರಣ ನೀತಿಯ ಹಿನ್ನೆಲೆಯಲ್ಲಿ ಮದ್ಯ ವಿತರಣೆಗೆ ನೀಡಿದ್ದ ಏಕ ಸ್ವಮ್ಯತೆಯನ್ನು ದಿನಾಂಕ 13-2-97 ರಂದು ಸಂಬಂಧಪಟ್ಟ ಅಬಕಾರಿ ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಸರ್ಕಾರವು ಹಿಂತೆಗೆದುಕೊಂಡಿದೆ.

(4) -ಇಲ್ಲ-

(5) -ಉದ್ಭವಿಸುವುದಿಲ್ಲ-

ರಾಜ್ಯದಲ್ಲಿರುವ ಆಟೋರಿಕ್ಷಾ ಚಾಲಕರ ಕುರಿತು

249(2) ಶ್ರೀಮತಿ ಪುಮೀಳಾ ನೇಸರ್ಗಿ (ಚಾಮರಾಜ ಪೇಟೆ):

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಹುತೇಕ ಆಟೋರಿಕ್ಷಾಗಳ ಚಾಲಕರು ಕರೆದ ಕಡೆಗೆ ಬಾರದಿರುವ ಸಂಗತಿ ಹಾಗೂ ಈ ಬಗ್ಗೆ ಸಂಚಾರಿ ಪೊಲೀಸರಿಂದ ಯಾವುದೇ ನೆರವು ಸಿಗದೆ ಪ್ರಯಾಣಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2. ಹಾಗಿದ್ದ ಪಕ್ಷದಲ್ಲಿ ಸಂಚಾರಿ ಪೊಲೀಸರು ಈ ದಿಸೆಯಲ್ಲಿ ಪ್ರಯಾಣಿಕರಿಗೆ ಪ್ರಾಮಾಣಿಕವಾಗಿ ನೆರವು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು.)

1. ಆಟೋರಿಕ್ಷಾಗಳ ಚಾಲಕರು ಕರೆದ ಕಡೆಗೆ ಬಾರದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ. ಸಂಚಾರಿ ಪೊಲೀಸರಿಂದ ಯಾವುದೇ ನೆರವು ಸಿಗದೆ ಪ್ರಯಾಣಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

2. ಈ ದಿಸೆಯಲ್ಲಿ ಸಂಚಾರಿ ಪೊಲೀಸರು ಪ್ರಯಾಣಿಕರಿಗೆ ನೆರವು ನೀಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತಾರೆ.

1. ಸಾರ್ವಜನಿಕರು ಕರೆದ ಕಡೆಗೆ ಬಾರದಿರುವ ಆಟೋರಿಕ್ಷಾ ಚಾಲಕರ ವಿರುದ್ಧ ಈ ಕೆಳಕಂಡಂತೆ ಕೇಸುಗಳನ್ನು ದಾಖಲು ಮಾಡಿರುತ್ತಾರೆ.

1993	1994	1995	1996
7020	7853	7340	22620

2. ಆಟೋ ಚಾಲಕರ ವಿರುದ್ಧ ವಿಶೇಷ ತಪಾಸಣೆ ನಡೆಸಲಾಗುತ್ತಿದೆ.

3. ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡಿಗೆ ಬಾಡಿಗೆ ಬರಲು ನಿರಾಕರಿಸುವಂತಹ ಆಟೋರಿಕ್ಷಾ ಚಾಲಕರ ವಾಹನಗಳ ಸಂಖ್ಯೆ ಮತ್ತು ಪ್ರಯಾಣಿಕರ ವಿಳಾಸಗಳನ್ನು ಬರೆದುಕೊಂಡು ಪ್ರಯಾಣಿಕರಿಗೆ ನೆರವು ನೀಡುತ್ತಿದ್ದಾರೆ.

4. ಪ್ರಯಾಣಿಕರಿಂದ ಆಟೋ ಚಾಲಕರ ವಿರುದ್ಧ ಪ್ರತ್ಯೇಕವಾಗಿ ದೂರುಗಳು ಬಂದಾಗ ಅವುಗಳನ್ನು ಸ್ವೀಕರಿಸಿ ಆಟೋರಿಕ್ಷಾ ಚಾಲಕರ ವಿರುದ್ಧ ಕ್ರಮ ಕೈಗೊಂಡು ಪಿರ್ಯಾದುದಾರರಿಗೆ ಕ್ರಮ ಕೈಗೊಂಡ ಬಗ್ಗೆ ತಿಳಿಸಲಾಗುತ್ತಿದೆ.

5. ಸಾರ್ವಜನಿಕರ ಅನುಕೂಲಕ್ಕಾಗಿ ಅವರಿಗೆ ಆಟೋರಿಕ್ಷಾ ಕಂಪ್ಲೇಂಟ್ ಕಾರ್ಡ್‌ಗಳನ್ನು ಪೊಲೀಸ್ ಠಾಣೆಗಳಲ್ಲಿ, ಬಸ್ ನಿಲ್ದಾಣ, ರೈಲ್ವೇ ಸ್ಟೇಷನ್ ಇತ್ಯಾದಿ ಸ್ಥಳಗಳಲ್ಲಿ ವಿತರಿಸಲಾಗುತ್ತಿದೆ.

6. ಆಟೋರಿಕ್ಷಾ ಚಾಲಕರಿಗೆ ಸಂಚಾರ ತರಬೇತಿ ಸಂಸ್ಥೆಯಲ್ಲಿ ಪ್ರತ್ಯೇಕವಾಗಿ ತರಬೇತಿಯನ್ನು ಸದಾ ಕೊಡಲಾಗುತ್ತಿದೆ.

7. ಕರೆದ ಕಡೆಗೆ ಬರದಿರುವುದಲ್ಲದೆ ಇನ್ನು ಇತರೇ ಸಂಚಾರ ನಿಯಮಗಳನ್ನು ಉಲ್ಲಂಘಿಸಿದಾಗಲೂ ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರಿನ ಕೆಂಪೇಗೌಡ ರಸ್ತೆ ಹಾಗೂ ಗಾಂಧಿನಗರದಲ್ಲಿ ಪುಟ್‌ಪಾತ್ ವ್ಯಾಪಾರಿಗಳ ಹಾವಳಿ ಕುರಿತು

250 (6) ಶ್ರೀಮತಿ ಪದ್ಮಿನೀ ನೇಸರ್ಗಿ (ಚಾಮರಾಜ ಪೇಟೆ):

ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?